**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.104/2025**

| | | |
|---|---|---|
| ಸಾಕ್ಷಿದಾರರ ಹೆಸರು | : | ಕೊಲ್ಲಪ್ಪ |
| ತಂದೆಯ ಹೆಸರು | : | ಚೌಡಪ್ಪ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಕೂಲಿ |
| ವಾಸ ಸ್ಥಳ | : | ಹೆಗಡೆಹಾಳು ಗ್ರಾಮ, ಭರಮಸಾಗರ ತಾಲ್ಲೂಕು |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 14-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ನಮ್ಮ ತಂದೆ ತಾಯಿಗೆ ನಾವು 3 ಜನ ಗಂಡು ಮಕ್ಕಳು ನಾನು, ನನ್ನ ತಮ್ಮಂದಿರು ಕರಿಯಪ್ಪ ಮತ್ತು ಶಿವುಕುಮಾರ ಮತ್ತು ಅಕ್ಕ ಚೌಡಮ್ಮ. ಶಿವುಕುಮಾರ ಆಂಧ್ರಪ್ರದೇಶದಲ್ಲಿ ಬೇಕರಿ ಕೆಲಸ ಮಾಡಿಕೊಂಡು ಇದ್ದಾನೆ. ತಿಂಗಳಿಗೆ ಅಥವಾ ಎರಡು ತಿಂಗಳಿಗೊಮ್ಮೆ ಶಿವುಕುಮಾರ ಮನೆಗೆ ಬಂದು ಹೋಗುತ್ತಿದ್ದರು. ಶಿವುಕುಮಾರರವರು ಈಗ ಜೀವಂತ ಇಲ್ಲ ಅವರನ್ನು ಸಾಯಿಸಿರುತ್ತಾರೆ. ನನ್ನ ತಮ್ಮ ಶಿವುಕುಮಾರವರನ್ನು ಹೊಡೆದು ಸಾಯಿಸಿದ್ದಾರೆ. ಈಗ ವಿಸಿಯಲ್ಲಿ ಕಾಣುತ್ತಿರುವ ಆರೋಪಿಯೇ ಈಗ 06 ತಿಂಗಳ ಹಿಂದೆ ನನ್ನ ತಮ್ಮನಿಗೆ ಹೊಡೆದು ಸಾಯಿಸಿದ್ದಾರೆ.

2. ಈಗ 06 ತಿಂಗಳ ಹಿಂದೆ ಆಂಧ್ರದಿಂದ ಶಿವುಕುಮಾರ ನಮ್ಮ ಮನೆಗೆ ಬಂದಿದ್ದರು. ದಿಃ 04-04-2025 ರಂದು ಹೊನ್ನೂರಿಗೆ ಹೋಗುತ್ತೇನೆ ಅಂತ ಹೇಳಿ ಸಂಜೆ 7.30 ಗಂಟೆಗೆ ಚಾಸಾ-8 ಮತ್ತು 9 ರವರೊಂದಿಗೆ ಹೋಗಿರುತ್ತಾನೆ. ಶಿವುಕುಮಾರರವರು ಮನೆಯಿಂದ ಆಚೆ ಹೋದವನು ಆ ದಿನ ರಾತ್ರಿ

ಮನೆಗೆ ಬರಲಿಲ್ಲ. ಮಾರನೇ ದಿನ ಬೆಳಿಗ್ಗೆ 10.30 ಗಂಟೆಗೆ ನನ್ನ ತಮ್ಮ ಶಿವುಕುಮಾರರವರನ್ನು ಹೊನ್ನೂರು-ಗೊಲ್ಲರಹಟ್ಟಿಯಲ್ಲಿ ಹೊಡೆದು ಹಾಕಿದ್ದಾರೆ ಅಂತ ವಿಷಯ ಗೊತ್ತಾಯಿತು. ಆಗ ನಾನು, ಚಾಸಾ-5 ಮತ್ತು 7 ರವರು ಹೊನ್ನೂರು-ಗೊಲ್ಲರಹಟ್ಟಿಗೆ ಹೋಗಿ ಅಲ್ಲಿ ನೋಡಿದಾಗ ನನ್ನ ತಮ್ಮನ ಶವ ಇತ್ತು. ನನ್ನ ತಮ್ಮನ ತಲೆಗೆ, ಮೂಗಿಗೆ, ಎದೆಗೆ ಮತ್ತು ದೇಹಕ್ಕೆ ಹೊಡೆತ ಬಿದ್ದಿದ್ದರಿಂದ ಗಾಯಗಳಾಗಿ ಮೂಗಿನಿಂದ ರಕ್ತ ಬರುತ್ತಿತ್ತು. ನನ್ನ ತಮ್ಮನ ಮೃತ ದೇಹದ ಮೇಲೆ ಪ್ಯಾಂಟ್ ಮತ್ತು ಚಡ್ಡಿ ಮಾತ್ರ ಇತ್ತು. ಇದರ ಬಗ್ಗೆ ನಾನು ಚಾಸಾ-8 ರಮೇಶರವರನ್ನು ವಿಚಾರಿಸಿದಾಗ, ಅವರು ಶಿವುಕುಮಾರ ಜೊತೆ ನಾನು ಮತ್ತು ಅಜಯ ಬೈಕ್ ನಲ್ಲಿ ಹಿಂದಿನ ದಿನ ರಾತ್ರಿ 7.30 ಗಂಟೆಗೆ ಹೊನ್ನೂರಿಗೆ ಹೋಗಿದ್ದೆವು ಅಂತ ತಿಳಿಸಿದರು. ಪರಿಮಳ ಎಂಬುವವರು ಫೊನ್ ಮಾಡಿ ನನ್ನ ತಮ್ಮನನ್ನು ಕರೆಸಿದ್ದರು ಅಂತ ಚಾಸಾ-8 ರವರು ಹೇಳಿದರು. ಶಿವುಕುಮಾರವರನ್ನು ಹೊನ್ನೂರಿನಲ್ಲಿ ಇಳಿಸಿ ರಮೇಶ ಮತ್ತು ಅಜಯರವರು ಅತ್ತೆ ಮನೆಗೆ ಹೋದರು ಅಂತ ತಿಳಿಸಿದರು. ನನ್ನ ತಮ್ಮ ಶಿವುಕುಮಾರರವರು ರಮೇಶರವರಿಗೆ ರಾತ್ರಿ 9.00-9.30 ಗಂಟೆಗೆ ಫೊನ್ ಮಾಡಿ ನನಗೆ ಒಂದು ಬಿಯರ್ ತಂದು ಕೊಡು ಅಂತ ಹೇಳಿದ. ರಮೇಶರವರು ಹೊಲದ ಹತ್ತಿರ ನನ್ನ ತಮ್ಮ ಶಿವುಕುಮಾರ ಆತನಿಗೆ 200 ರೂಪಾಯಿ ಕೊಟ್ಟು ಬಿಯರ್ ತರಲು ಹೇಳಿದ. ರಮೇಶರವರು ಹಣವನ್ನು ತೆಗೆದುಕೊಂಡು ಬಿಯರ್ ಬಾಟಲಿಗೆ ಎಲ್ಲಾ ಕಡೆ ಹುಡುಕಾಡಿದರು ಮತ್ತು ಸಿಕ್ಕಿರಲಿಲ್ಲ. ಆದ್ದರಿಂದ ಶಿವುಕುಮಾರವರಿಗೆ ಫೊನ್ ಮಾಡಿದಾಗ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ರಮೇಶರವರು ಶಿವುಕುಮಾರನ ಇನ್ನೊಂದು ಮೊಬೈಲ್ ನಂಬರಗೆ ಫೊನ್ ಮಾಡಿದಾಗ ಪರಿಮಳ ಎಂಬುವವರು ಕರೆಯನ್ನು ಸ್ವೀಕರಿಸಿ "ನಾವು ಮನೆಯ ಹತ್ತಿರ ಇದ್ದೇವೆ ಬನ್ನಿ " ಅಂತ ಹೇಳಿದರು. ರಮೇಶ ಮತ್ತು ಅಜಯರವರು ಪರಿಮಳರವರ ಮನೆಯ ಹತ್ತಿರ ಹೋದರು, ಆಗ ಪರಿಮಳರವರ ಗಂಡ ಜಯಪ್ಪ ಅಂದರೆ ಆರೋಪಿಯು ಶಿವುಕುಮಾರವರಿಗೆ ಒಂದೆರಡು ಏಟು ಹೊಡೆದರು, ಆಗ ನನ್ನ ತಮ್ಮ ಹೊಲದ ಕಡೆ ಓಡಿ ಹೋದ. ಆರೋಪಿಯು ನನ್ನ ತಮ್ಮನ ಬೆನ್ನು ಹತ್ತಿಕೊಂಡು ಹೋಗಿ ಕೈ ಕಾಲುಗಳಿಂದ ನಮ್ಮ ತಮ್ಮನ ಮೈ ಕೈಗೆ ಹೊಡೆದ ಮತ್ತು ಕಲ್ಲಿನಿಂದ ನನ್ನ ತಮ್ಮನಿಗೆ ಪದೇ ಪದೇ ಹೊಡೆದು ಕೈಯಿಂದ

ಉಸಿರುಗಟ್ಟಿಸಿ ಸಾಯಿಸಿದರು. ಈ ಎಲ್ಲಾ ವಿಷಯ ರಮೇಶ ಹೇಳಿರುವುದರಿಂದ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ನಾನು ಕೊಟ್ಟ ದೂರನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ದೂರನ್ನು ನಿಪಿ-1 ಅಂತ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತ ಗುರುತಿಸಲಾಯಿತು. ನನ್ನ ತಮ್ಮ ಶಿವುಕುಮಾರವರನ್ನು ಕೊಲೆ ಮಾಡಿದ ವ್ಯಕ್ತಿಯ ನ್ಯಾಯಾಲಯದಲ್ಲಿ ವಿಸಿ ಮುಖಾಂತರ ದಾವಣಗೆರೆಯ ಜೈಲಿನಿಂದ ಕಾಣಿಸುತ್ತಿದ್ದಾರೆ. ಅವರನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

3. ದಿಃ 05-04-2025 ರಂದು ಮಧ್ಯಾಹ್ನ 12.10 ಗಂಟೆಗೆ ದೂರನ್ನು ಕೊಟ್ಟಿದ್ದೇನೆ. ಪೊಲೀಸರು ನನಗೆ ನನ್ನ ತಮ್ಮನ ಕೊಲೆಯಾದ ಸ್ಥಳವನ್ನು ತೋರಿಸಲು ಹೇಳಿದರು. ಅದಕ್ಕೆ ನಾನು ಹೊನ್ನೂರು-ಗೊಲ್ಲರಹಟ್ಟಿ ಗೆ ಕರೆದುಕೊಂಡು ಹೋಗಿ ಜಾಗ ತೋರಿಸಿರುತ್ತೇನೆ. ಅಲ್ಲಿ ನನ್ನ ತಮ್ಮನ ಶವದ ತಲೆ ಉತ್ತರ ಕಡೆ ಮತ್ತು ಕಾಲು ದಕ್ಷಿಣ ಕಡೆ ಇತ್ತು, ನನ್ನ ತಮ್ಮನ ಮೈ ಮೇಲೆ ಪ್ಯಾಂಟ್ ಮತ್ತು ಚಡ್ಡಿ ಮಾತ್ರ ಇತ್ತು. ಕುತ್ತಿಗೆ, ತಲೆ ಮತ್ತು ಮೈ ಮೇಲೆ ಎಲ್ಲಾ ಗಾಯವಾಗಿತ್ತು ಮತ್ತು ಮೂಗಿನಿಂದ ರಕ್ತ ಬರುತ್ತಿತ್ತು. ನನ್ನ ತಮ್ಮ ಆತನ ಕೈ ಮೇಲೆ ಅಮ್ಮ ಅಪ್ಪ ಅಂತ ಅಚ್ಚೆ ಹಾಕಿಸಿಕೊಂಡಿದ್ದ. ಅಲ್ಲಿ ಕೆಂಪು ಮತ್ತು ಬಿಳಿ ಬಣ್ಣದ ಒಂದು ಸರ ಬಿದ್ದಿತ್ತು. 200-300 ಅಡಿ ದೂರದಲ್ಲಿ ಒಂದು ಅಂಗಿ, ಬನಿಯನ್ ಮತ್ತು ಒಂದು ಜೊತೆ ಚಪ್ಪಲಿ ಬಿದ್ದಿತ್ತು. ಸ್ಥಳದಲ್ಲಿ ಪೊಲೀಸರು ರಕ್ತ ಆಗಿರುವ ಮಣ್ಣು, ರಕ್ತ ಆಗದೇ ಇರುವ ಮಣ್ಣು, ಒಂದು ಕಲ್ಲು, ಒಂದು ಸರ, ಅಂಗಿ, ಒಂದು ಜೊತೆ ಚಪ್ಪಲಿ ತೆಗೆದುಕೊಂಡು ಮಧ್ಯಾಹ್ನ 1.30 ರಿಂದ 2.30 ಗಂಟೆಯವರೆಗೆ ಪಂಚನಾಮೆ ಮಾಡಿ, ಅಮಾನುತ್ತು ಮಾಡಿಕೊಂಡರು. ಆ ಪಂಚನಾಮೆಯನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಪಂಚನಾಮೆಯನ್ನು ನಿಪಿ-2 ಅಂತ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಅಂತ ಗುರುತಿಸಲಾಯಿತು. ಮಹಜರ ಮಾಡುವ ಸಮಯದಲ್ಲಿ ನನ್ನ ಜೊತೆ ಚಾಸಾ-3 ಮತ್ತು ಇನ್ನೊಬ್ಬರು ಸಹಿ ಮಾಡಿರುತ್ತಾರೆ. ಆ ಇನ್ನೊಬ್ಬರ ಹೆಸರು ನೆನಪಾಗುತ್ತಿಲ್ಲ. ನಾನು ಈಗ ನೋಡಿದ 07 ಪೋಟೋಗಳ ಪೈಕಿ 05 ಪೋಟೋಗಳಲ್ಲಿ ನಾನು ಇದ್ದೇನೆ. ಈ 7 ಪೋಟೋಗಳನ್ನು ನಿಪಿ-3 ರಿಂದ 9 ಅಂತ ಗುರುತಿಸಲಾಯಿತು. ನಿಪಿ-3 ಮತ್ತು 4 ರ ಪೋಟೋಗಳಲ್ಲಿ ನನ್ನ ತಮ್ಮನ ಮೃತ ದೇಹ ಕಂಡು

ಬರುತ್ತದೆ. ನಿಪಿ-5 ಮತ್ತು 6ರ ಪೋಟೋಗಳಲ್ಲಿ ನನ್ನ ತಮ್ಮ ಧರಿಸಿದ ಶರ್ಟ ಮತ್ತು ಬನಿಯನ್ ಹಾಗೂ ಚಪ್ಪಲಿ ಕಂಡು ಬರುತ್ತದೆ. ನಿಪಿ-7ರ ಪೋಟೋದಲ್ಲಿ ನನ್ನ ತಮ್ಮ ಧರಿಸಿದ ಶರ್ಟ ಮತ್ತು ಬನಿಯನ್ ನ್ನು ನಾನು ಪೊಲೀಸರಿಗೆ ಮಹಜರ ಸಮಯದಲ್ಲಿ ಕೊಡುತ್ತಿರುವುದು ಕಂಡು ಬರುತ್ತದೆ. ನಿಪಿ-8 ಮತ್ತು 9ರಲ್ಲಿ ನನ್ನ ತಮ್ಮ ಶವ ಉತ್ತರ ದಿಕ್ಕಿಗೆ ತಲೆಯಾಗಿ ಬಿದ್ದಿರುವುದು ಕಂಡು ಬರುತ್ತದೆ. PF.No.59/2025ರಲ್ಲಿ ಕ್ರಮ ಸಂಖ್ಯೆ 1 ರಿಂದ 7 ಪ್ರಯೋಗಾಲಯದ ಸೀಲ್ ನಿಂದ ಕೂಡಿದ್ದು ತೆರೆದ ನ್ಯಾಯಾಲಯದಲ್ಲಿ ನ್ಯಾಯಾಲಯದ ಅನುಮತಿ ಮೇರೆಗೆ ಸದರಿ ಸೀಲ್ ಗಳನ್ನು ಓಪನ್ ಮಾಡಲಾಯಿತು. ಕೃತ್ಯ ಸ್ಥಳದಲ್ಲಿ ಸಂಗ್ರಹಿಸಿದ ರಕ್ತ ಮಿಶ್ರಿತ ಮಣ್ಣು ಮು.ಮಾ.1 ಅಂತ ಗುರುತಿಸಲಾಯಿತು. ಮೃತ ದೇಹದ ದೂರದಲ್ಲಿ ಶೇಖರಿಸಿದ ಮಾದರಿ ಮಣ್ಣು ಮು.ಮಾ.2 ಅಂತ ಗುರುತಿಸಲಾಯಿತು. ಕಲ್ಲನ್ನು ಮು.ಮಾ.3 ಅಂತ ಗುರುತಿಸಲಾಯಿತು. ಒಂದು ಕೆಂಪು ದಾರದ ಬಿಳಿ ಹರಳಿನ ಒಂದು ಸರ ನನ್ನ ತಮ್ಮನಿಗೆ ಸೇರಿದ್ದು, ಅದನ್ನು ಮು.ಮಾ.4 ಅಂತಗುರುತಿಸಲಾಯಿತು. ತುಂಬು ತೋಳಿನ ನೀಲಿ ಬಣ್ಣದ ನನ್ನ ತಮ್ಮನ ಶರ್ಟನ್ನು ಮು.ಮಾ.5 ಅಂತ, Distemper colour ಬನಿಯನ್ ನ್ನು ಈಗ ನೋಡುತ್ತಿದ್ದು, ಅದನ್ನು ಮು.ಮಾ.6 ಅಂತ ಗುರುತಿಸಲಾಯಿತು. ಎರಡು ರಬ್ಬರ್ ಚಪ್ಪಲಿಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ.7 ಅಂತ ಗುರುತಿಸಲಾಯಿತು. ಸಾಕ್ಷಿದಾರರು ಮು.ಮಾ.1 ರಿಂದ 7ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯು ತನ್ನ ಹೆಂಡತಿಯಾದ ಪರಿಮಳಳೊಂದಿಗೆ ನನ್ನ ತಮ್ಮ ಶಿವುಕುಮಾರ ಅಕ್ರಮ ಸಂಬಂಧ ಇದೆ ಅಂತ ನನ್ನ ತಮ್ಮನನ್ನು ಆರೋಪಿ ಕೊಲೆ ಮಾಡಿರುತ್ತಾರೆ.

4. ಮೇಲ್ಕಂಡಂತೆ ಮಹಜರನ್ನು ಜರುಗಿಸಿ ನನ್ನ ತಮ್ಮನ ಮೃತ ದೇಹವನ್ನು ದಾವಣಗೆರೆಯ ಸಿ.ಜಿ. ಆಸ್ಪತ್ರೆಗೆ ತಂದಿರುತ್ತಾರೆ. ಶವ ತನಿಖಾ ಸಮಯದಲ್ಲಿ ತೆಗೆದಿರುವ 4 ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-10 ರಿಂದ 13 ಅಂತ ಗುರುತಿಸಲಾಯಿತು. ನಿಪಿ-11ರ ಪೋಟೋದಲ್ಲಿ ನನ್ನ ತಮ್ಮನ ಮೂಗಿನಿಂದ ರಕ್ತ ಬಂದಿರುವುದು ಕಾಣುತ್ತದೆ. ನಿಪಿ-10, 12 ಮತ್ತು 13ರಲ್ಲಿ ನನ್ನ ತಮ್ಮನ ಶವ ಕಂಡು ಬರುತ್ತದೆ. ಈಗ ತೆರೆದ ನ್ಯಾಯಾಲಯದಲ್ಲಿ ಸೀಲ್ ಮಾಡಿದ ಮಾದರಿಗಳನ್ನು ಓಪನ್ ಮಾಡಿ

ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅವುಗಳನ್ನು ನೋಡಿ ಆ ದಿನ ನನ್ನ ತಮ್ಮ ಧರಿಸಿದ ಪ್ಯಾಂಟ್ ಮತ್ತು ಒಳ ಉಡುಪು ಅಂತ ಹೇಳುತ್ತಾರೆ. ಪ್ಯಾಂಟ್ ನ್ನು ಮು.ಮಾ.8 ಅಂತ, ಒಳ ಉಡುಪನ್ನು ಮು.ಮಾ.9 ಅಂತ ಗುರುತಿಸಲಾಯಿತು. ಕೆಂಪು, ಹಳದಿ, ಹಸಿರು, ಕಪ್ಪು ಬಣ್ಣದ ದಾರವನ್ನು ಮು.ಮಾ.10 ಅಂತ ಗುರುತಿಸಲಾಯಿತು. ಕಪ್ಪು ಬಣ್ಣದ ಕೈಗೆ ಕಟ್ಟುವ ದಾರವನ್ನು ಮು.ಮಾ.11 ಅಂತ ಗುರುತಿಸಲಾಯಿತು. ನನ್ನ ತಮ್ಮ ಕಾಲಿಗೆ ಕಟ್ಟಿದ ಕಪ್ಪು ದಾರವನ್ನು ಈಗ ನೋಡುತ್ತಿದ್ದು, ಅದನ್ನು ಮು.ಮಾ.12 ಅಂತ ಗುರುತಿಸಲಾಯಿತು. ಇವುಗಳನ್ನೆಲ್ಲಾ ಪೊಲೀಸರು ಜಪ್ತು ಮಾಡಿಕೊಂಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ಆರೋಪಿ ಪರ ವಕೀಲರು ಸಮಯ ಕೋರಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 08-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ.ಹೆಚ್.ಎಂ. (ಎಲ್.ಎ.ಡಿ.ಸಿ.) ಆರೋಪಿತರ ಪರವಾಗಿ**:

5. ನಾನು ಬೇರೆ ಬೇರೆ ಊರಿಗೆ ಹೋಗಿ ಕೂಲಿ ಕೆಲಸ ಮಾಡಿಕೊಂಡಿದ್ದೇನೆ. ನನ್ನ ತಮ್ಮ ದಿಃ 04-04-2025 ರಂದು ಹೋಗುವಾಗ ನನಗೆ ಹೇಳಿ ಹೋಗಿರಲಿಲ್ಲ. ನನ್ನ ತಮ್ಮನಿಗೆ ಕುಡಿಯುವ ಚಟ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಚಾಸಾ-8 ರವರ ಅತ್ತೆ ಹೊನ್ನೂರಿನಲ್ಲಿ ವಾಸವಾಗಿರುತ್ತಾರೆ ಅಂದರೆ ನಿಜ. ಆ ದಿನ ರಾತ್ರಿ ನನಗೆ ಫೋನ್ ಮಾಡಿ ಯಾರೂ ಏನೂ ತಿಳಿಸಿಲ್ಲ. ನಾವು ಫೋನ್ ಮಾಡಿ ವಿಚಾರಿಸಿಲ್ಲ ಅಂದರೆ ನಾನು ಫೋನ್ ಮಾಡಿದ್ದೆ ಸ್ವಿಚ್ ಆಫ್ ಆಗಿತ್ತು. ಊರಿನ ಜನರಿಂದ ನನಗೆ ಬೆಳಿಗ್ಗೆ 10.00 ಗಂಟೆಗೆ ಘಟನೆಯಾದ ವಿಚಾರ ಗೊತ್ತಾಯಿತು. ಆಗ ನಾನು ಮತ್ತು ಇತರರು ಸೇರಿ ಸ್ಥಳ ತಲುಪಿದಾಗ 11.00 ಗಂಟೆ ಆಗಿತ್ತು. ಆ ದಿನ ರಾತ್ರಿ ಚಾಸಾ-8 ರವರು ಬಂದು ನನಗೆ ಏನೂ ಹೇಳಿಲ್ಲ. ನಾನು ಚಾಸಾ-8 ರವರಿಗೆ ಏನೂ ಕೇಳಲಿಲ್ಲ. ಆ ದಿನ ಚಾಸಾ-10 ರವರು ಮೃತ ವ್ಯಕ್ತಿಗೆ ಫೋನ್ ಮಾಡಿದ್ದು ಸುಳ್ಳು ಅಂದರೆ ಸರಿಯಲ್ಲ. ನನ್ನ ತಮ್ಮನಿಗೆ ಹಲ್ಲೆ ಮಾಡಿದ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರು ಓದಿ ಹೇಳಿದ ನಂತರ ನಾನು ಸಹಿ ಮಾಡಿದ್ದೇನೆ. ಅದರಲ್ಲಿ ಬರೆದ ವಿಷಯ ನನಗೆ ಗೊತತಿಲ್ಲ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

6. ವಿಸಿ ಮೂಲಕ ಇದೇ ಮೊದಲ ಸಲ ಆರೋಪಿಯನ್ನು ನೋಡುತ್ತಿದ್ದೇನೇ ಅಂದರೆ ಸರಿಯಲ್ಲ ಮೊದಲೇ ನೋಡಿದ್ದೇನೆ. ಸ್ಥಳದಲ್ಲಿ ವಸ್ತುಗಳನ್ನು ಅಮಾನತ್ತು ಮಾಡಿಕೊಂಡಿದ್ದು ಸುಳ್ಳು ಅಂದರೆ ಸರಿಯಲ್ಲ. ಮೃತ ಶಿವುಕುಮಾರರವರಿಗೂ ಮತ್ತು ಚಾಸಾ-10 ರವರಿಗೂ ಅಕ್ರಮ ಸಂಬಂಧ ಇತ್ತು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸ್ಥಳದಲ್ಲಿ ಪೊಲೀಸರು ಪೋಟೋ ತೆಗೆದಿದ್ದು ಸುಳ್ಳು ಅಂದರೆ ಸರಿಯಲ್ಲ.

7. ದೂರನ್ನು ಎಲ್ಲಿ ಯಾರು ಟೈಪ್ ಮಾಡಿದ್ದಾರೆ ಅಂದರೆ ಪೊಲೀಸ್ ಠಾಣೆಯಲ್ಲಿ ಟೈಪ್ ಮಾಡಿಸಿರುತ್ತೇನೆ. ನಾನು ಮತ್ತು ಚಾಸಾ-5 ಹಾಗೂ 7 ರವರು ಸೇರಿ ದೂರಿಗೆ ಮಾಹಿತಿಯನ್ನು

ಕೊಟ್ಟಿದ್ದೇವೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-2 ರಲ್ಲಿ ಏನು ಬರೆದಿದ್ದಾರೆ ಅಂತ ನನಗೆ ಗೊತ್ತಿಲ್ಲ ಅಂದರೆ ನನಗೆ ಓದಿ ಹೇಳಿದ ನಂತರವೇ ಸಹಿ ಮಾಡಿದ್ದೇನೆ. ನಿಪಿ-2 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಿಪಿ-3 ಮತ್ತು 4 ರ ಮಾಹಿತಿ ನನಗೆ ಇಲ್ಲ ಅಂದರೆ ಸರಿಯಲ್ಲ. ನನ್ನ ತಮ್ಮನಿಗೆ ಕುಡಿಯುವ ಮತ್ತು ಇಸ್ಪೇಟ್ ಚಟ ಇತ್ತು ಅಂದರೆ ಸರಿಯಲ್ಲ. ನನ್ನ ತಮ್ಮನಿಗೆ ಕುಡಿಯುವ ಮತ್ತು ಇಸ್ಪೇಟ್ ಚಟ ಇರುವುದರಿಂದ ಊರಿನಲ್ಲಿ ಹೊನ್ನೂರ ಜನರೊಂದಿಗೆ ಜಗಳ ಆಗಿತ್ತು ಅಂದರೆ ಸುಳ್ಳು. ನನ್ನ ಸಮಕ್ಷಮ ಯಾವುದೇ ಶವ ತನಿಖೆ ಆಗಿಲ್ಲ ಅಂದರೆ ಸುಳ್ಳು. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ದೂರು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯ ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.